**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.38/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಸುರೇಶ ಹರಿಜನ | ಸಿಡಬ್ಲ್ಯು | 7 |
| ತಂದೆ ಹೆಸರು | ಫಕ್ಕೀರಪ್ಪ | ಪಿಡಬ್ಲ್ಯು | 2 |
| ವಯಸ್ಸು | 35 ವರ್ಷ | | |
| ಉದ್ಯೋಗ | ಅತಿಥಿ ಉಪನ್ಯಾಸಕ | | |
| ವಾಸಸ್ಥಳ | ಚಿಕ್ಕಹುಲ್ಲಾಳ | | |

**ದಿಃ 31.07.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

**1).** ಸಾಕ್ಷಿಗೆ ನಿ.ಪಿ-11 ಸ್ಥಳ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿ.ಪಿ-11(ಬಿ) ಎಂದು ಗುರುತಿಸಲಾಯಿತು. ನವೆಂಬರ 2020 ರಲ್ಲಿ ಹಾವೇರಿಯಿಂದ ಊರಿಗೆ ಹೋಗುತ್ತಿದ್ದಾಗ ಕುಳೇನೂರ ಕ್ರಾಸ ಬಳಿ ನಮ್ಮ ಗ್ರಾಮದವರು ಮತ್ತು ಪೊಲೀಸರು ಇದ್ದರು. ಏನು ಎಂದು ನಾನು ನೋಡಲು ಹೋದಾಗ ನನ್ನನ್ನು ಮತ್ತು ಚಾ.ಸಾ-6 ರವರನ್ನು ಪಂಚರನ್ನಾಗಿ ಕರೆದು ಪಂಚನಾಮೆ ಮಾಡಿದ್ದಾರೆ. ಚಾ.ಸಾ-1 ರವರು ಸ್ಥಳವನ್ನು ತೋರಿಸಿದ್ದಾರೆ. ಪಂಚನಾಮೆಯನ್ನು ಸಾಯಂಕಾಲ 4-00 ರಿಂದ 5-00 ಘಂಟೆ ಸಮಯದಲ್ಲಿ ಮಾಡಿದ್ದಾರೆ, ನಕಾಶೆಯನ್ನು ಸಹ ಅಲ್ಲಿ ಬರೆದರು, ಅದಕ್ಕೂ ಸಹ ಸಹಿ ಮಾಡಿದ್ದೇನೆ. ನಕಾಶೆಯನ್ನು ಈಗಾಗಲೇ ನಿ.ಪಿ-12 ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-12(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ಪೋಟೋಗಳನ್ನು ತೆಗೆದಿದ್ದಾರೆ. ಅವುಗಳನ್ನು ಗುರುತಿಸಿದ್ದು, ಈಗಾಗಲೇ ನಿ.ಪಿ-13 ರಿಂದ ನಿ.ಪಿ-15 ಎಂದು ಗುರುತಿಸಲ್ಪಟ್ಟಿದೆ.

**2)** ನಂತರ ನನ್ನನ್ನು ಪೊಲೀಸ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಅಪಘಾತವಾಗಿದ್ದ ಕಾರು ಮತ್ತು ದ್ವಿಚಕ್ರ ವಾಹನ ಇತ್ತು. ಚಾ.ಸಾ-1 ರವರು ಅವುಗಳನ್ನು ತೋರಿಸಿದರು, ಆಗ ವಾಹನಗಳನ್ನು ಜಪ್ತು ಮಾಡಿಕೊಂಡು ಪಂಚನಾಮೆ ಮಾಡಿದ್ದಾರೆ. ಪಂಚನಾಮೆಯನ್ನು ಸಾಯಂಕಾಲ 5-30 ರಿಂದ 6-20 ಘಂಟೆಯವರೆಗೆ ಮಾಡಿದ್ದಾರೆ. ನಂತರ ಪೋಟೋಗಳನ್ನು ತೆಗೆದಿದ್ದಾರೆ. ಜಪ್ತು

ಪಂಚನಾಮೆಯನ್ನು ಗುರುತಿಸಿದ್ದು, ಈಗಾಗಲೇ ನಿ.ಪಿ-4 ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-4(ಬಿ) ಎಂದು ಗುರುತಿಸಲಾಯಿತು. ಫೋಟೋಗಳನ್ನು ಗುರುತಿಸಿದ್ದು, ಈಗಾಗಲೇ ನಿ.ಪಿ-5 ರಿಂದ ನಿ.ಪಿ-8 ಎಂದು ಗುರುತಿಸಲ್ಪಟ್ಟಿದೆ.

**ಪಾಟೀ ಸವಾಲುಃ 1 ನೇ ಆರೋಪಿ ಹಾಜರು, ವಕೀಲರು ಗೈರು ಹಾಜರು. ಪಾಟೀ ಸವಾಲಿಗೆ ಯಾವುದೇ ಕೋರಿಕೆ ಇರುವದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.